AKSHARASURYA
E-ISSN: 2583-620X
Peer-Reviewed, Multi Lingual E-Journal
Volume – 02, Issue – 03, March 2023.

# ವಿಶ್ವಕರ್ಮ ಸಂಸ್ಕೃತಿಯ ಕುರಿತು ಶಂಬಾ ಜೋಶಿಯವರ ವಿಚಾರಗಳು

**ಕಮ್ಮಾರ ಸುಮ**
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ–583276
sumakammar29@gmail.com

ಸಂಸ್ಕೃತಿ ಮನುಕುಲದ ಶ್ರೇಷ್ಠ ಅನ್ವೇಷಣೆಯಾಗಿದೆ. ಮಾನವ ಜೀವನದ ಆಚಾರ, ವಿಚಾರ, ರೂಢಿ, ಸಂಪ್ರದಾಯ ಆಲೋಚನೆ, ನಂಬಿಕೆ, ಪದ್ಧತಿಗಳು, ಭಾಷೆ, ಕಲಿಕೆ, ಅನುಭವ ಎಲ್ಲವೂ ಸಂಸ್ಕಾರಗೊಂಡು ಸಂಸ್ಕೃತಿ ರೂಪಿತವಾಗುತ್ತದೆ. ವ್ಯಕ್ತಿಯಾಗಿ ಜೀವಿಸುವ ಮಾನವನನ್ನು ವ್ಯಕ್ತಿತ್ವವಾಗಿ ರೂಪಿಸುವಲ್ಲಿ ಸಂಸ್ಕೃತಿ ಮಹತ್ವದ ಪಾತ್ರವಹಿಸುತ್ತದೆ. ವಿಶ್ವಕರ್ಮ ಸಂಸ್ಕೃತಿಯು ಕರ್ಮಧಾರಿತವಾದ ಧರ್ಮವಾಗಿದ್ದು ಇಂತಹ ಸೃಜನಶೀಲತೆಯನ್ನು ತನ್ನ ಜೀವಾಳವಾಗಿಸಿಕೊಂಡಿದೆ.

ವಿಶ್ವಕರ್ಮ ಸಂಸ್ಕೃತಿಯ ಪರಂಪರೆ ಮನುಕುಲದ ನಾಗರಿಕತೆ ಮತ್ತು ಸಂಸ್ಕೃತಿಯನ್ನು ತಮ್ಮ ವೈಜ್ಞಾನಿಕ ಜ್ಞಾನ ಮತ್ತು ತಾಂತ್ರಿಕ ಕೌಶಲ್ಯದಿಂದ ಪ್ರಬುದ್ಧವಾಗಿ ಬೆಳೆಸುವಲ್ಲಿ ವಿಶ್ವಕರ್ಮರು ಮಹತ್ವದ ಪಾತ್ರ ವಹಿಸಿದ್ದಾರೆ. ಹರಪ್ಪ ಮತ್ತು ಮೆಹೆಂಜೋದಾರ ವಿಶ್ವದ ಅತಿ ಹೆಚ್ಚು ಮಹತ್ವದ ಹಾಗೂ ಪುರಾತನವಾದ ನಾಗರಿಕತೆಯಾಗಿದೆ. ಬೃಹತ್ ಸ್ನಾನದ ಕೊಳ, ಕಟ್ಟಡ ನಿರ್ಮಾಣ, ಒಳಚರಂಡಿ ವ್ಯವಸ್ಥೆ, ನಗರ ನಿರ್ಮಾಣ ಮುಂತಾದವು ಹರಪ್ಪ ನಾಗರಿಕತೆಯ ಪ್ರಮುಖ ಪಳಿಯುಳಿಕೆಗಳಾಗಿವೆ. ಹರಪ್ಪ ನಾಗರಿಕತೆಯ ಕಾಲಕ್ಕೆ ವಿಶ್ವಕರ್ಮ ಸಂಸ್ಕೃತಿಯಲ್ಲಿ ವಾಸ್ತುಶಿಲ್ಪ, ಮೂರ್ತಿಶಿಲ್ಪ, ಲೋಹಶಿಲ್ಪ, ಕಾಷ್ಟಶಿಲ್ಪ, ಗೃಹ ಕೈಗಾರಿಕೆ ಗಳಂತಹ ಉದ್ಯಮಶೀಲ ಬೆಳವಣಿಗೆಯಾಗಿತ್ತು. ವೇದಪೂರ್ವ ಕಾಲದಲ್ಲಿನ ಸೈಂಧವ ಸಂಸ್ಕೃತಿಯಲ್ಲಿ ವಿಶ್ವಕರ್ಮ ಸಂಸ್ಕೃತಿಯ ಮೂಲವನ್ನು ಗುರುತಿಸಲಾಗಿದೆ. ಪ್ರಾಚೀನ ಕಾಲದಲ್ಲಿ ಆರ್ಷೇಯ ಬ್ರಾಹ್ಮಣರು ಮತ್ತು ವಿಶ್ವ ಬ್ರಾಹ್ಮಣರು ಎಂದು ಗುರುತಿಸಿಕೊಂಡಿದ್ದ ಎರಡು ಸಮುದಾಯಗಳು ಮಂತ್ರಾಂಗ ಮತ್ತು ಶಿಲ್ಪಾಂಗದ ರೂವಾರಿಗಳಾಗಿದ್ದರು. ಆದರೆ ಕ್ರಮೇಣ ಈ ಎರಡು ಸಮುದಾಯಗಳ ನಡುವೆ ಭಿನ್ನಾಭಿಪ್ರಾಯ ಹುಟ್ಟಿದ್ದರಿಂದ ಈ ಎರಡು ಸಮುದಾಯಗಳು ಪರಸ್ಪರ ಎದುರಾಳಿಯಾಗಿ ಒಬ್ಬರನ್ನೊಬ್ಬರು ತುಳಿಯಲು, ಶೋಷಿಸಲು ಮುಂದಾಗುತ್ತಾರೆ. ರಾಜಾಶ್ರಯ ಸಿಕ್ಕ ಬ್ರಾಹ್ಮಣರು ಮೇಲುಗೈಯಾಗಿ ರಾಜಾಶ್ರಯ ತಪ್ಪಿದ ಶಿಲ್ಪಿಗಳು ಅನೇಕ ಹಿಂಸೆ ಮತ್ತು ಅವಮಾನಗಳಿಗೆ ಗುರಿಯಾಗಬೇಕಾಗಿತು.

ವಿಶ್ವಕರ್ಮ ಸಂಸ್ಕೃತಿಯ ಪ್ರಾಚೀನತೆ ಹರಪ್ಪ ಮೆಹೆಂಜೋದಾರೋ ನಾಗರಿಕತೆಗೂ ಹಿಂದಿನ ಕಬ್ಬಿಣ ಯುಗದ ಆದಿಮಾನವ ಕಾಲದವರೆಗೆ ಚಾಚಿಕೊಂಡಿದೆ. ಪ್ರಾಚೀನ ಕಾಲದಿಂದಲೂ ಆಳುವ ವರ್ಗಗಳಿಂದ ಹಿಡಿದು ಕೃಷಿಕ, ನೇಕಾರ, ಗಾಣಿಗ, ಚಮ್ಮಾರ, ಬೇಟೆಗಾರ ಮುಂತಾದ ಪ್ರಜಾ ವರ್ಗಗಳಿಗೆ ಅವರವರ ಅವಶ್ಯಕತೆಗೆ ತಕ್ಕಂತೆ ವಸತಿ, ವಾಹನ, ಆಯುಧ, ಸಾಧನ, ಸಲಕರಣೆಗಳನ್ನು ಅಲಂಕಾರ ಮತ್ತು ವೇಷಭೂಷಣಗಳನ್ನು ವಿಶ್ವಕರ್ಮರು ಮಾಡಿದ್ದಾರೆ. ಹಾಗೆ ಆಯಾ ಧರ್ಮದವರಿಗೆ ಬಸಿದಿ, ಬಿಹಾರ, ಚೈತ್ಯಾಲಯ, ಗುಹಾಲಯ, ದೇವಾಲಯ, ದೇವತಾ ಪ್ರತಿಮೆಗಳನ್ನು ನಿರ್ಮಿಸಿ ಕೊಡುತ್ತಾ ಬಂದಿರುವ ವಿಶ್ವಕರ್ಮರು ಕರ್ಮಯೋಗಿಗಳಾಗಿದ್ದಾರೆ.

ವಿಶ್ವಕರ್ಮ ಸಂಸ್ಕೃತಿಯು ತನ್ನದೇ ಆದ ವೈಚಾರಿಕವಾದ, ವೈಜ್ಞಾನಿಕವಾದ, ಪ್ರಯೋಗಶೀಲವಾದ ತಾತ್ವಿಕತೆಯನ್ನು ಹೊಂದಿದೆ. ಈ ಸಂಸ್ಕೃತಿಯಲ್ಲಿ ಜಗತ್ತಿನ ಪ್ರತಿಯೊಂದು ವಸ್ತುವನ್ನು ಧಾರ್ಮಿಕವಾಗಿ ಗ್ರಹಿಸಲಾಗುವುದು. ಜಡವಾದ ಸ್ವಾಭಾವಿಕವಾದ ನೈಸರ್ಗಿಕ ರೂಪದಲ್ಲಿರುವ ಕಲ್ಲೊಂದರಲ್ಲಿ ದಿವ್ಯವಾದ ಶಿಲ್ಪವನ್ನು ರೂಪಿಸುವ ಶಿಲ್ಪಿಯಲ್ಲಿ ದರ್ಶನ ಪ್ರಜ್ಞೆ ಇರುತ್ತದೆ. ಜಗತ್ತಿನಲ್ಲಿ ಜಡವಾಗಿ ಬಿದ್ದಿರುವ ಭೌತಿಕ ವಸ್ತುಗಳಿಗೆ ವಿಶ್ವಕರ್ಮರು ತಮ್ಮ ಜ್ಞಾನ ಮತ್ತು ಕೌಶಲ್ಯದಿಂದ ಒಂದು ಸೂಕ್ತ ಆಕೃತಿ ನೀಡಿ ಆ ವಸ್ತುವನ್ನು ಲೋಕೋಪಯೋಗಕ್ಕೆ ಸಿದ್ಧಗೊಳಿಸುವ ಪ್ರಯೋಗಶೀಲತೆ ವಿಶ್ವಕರ್ಮ ಸಂಸ್ಕೃತಿಯ ತಾತ್ವಿಕತೆಯಾಗಿದೆ.

ವಿಶ್ವಕರ್ಮ ಸಂಸ್ಕೃತಿಯು ಕರ್ಮಧಾರಿತವಾಗಿದೆ. ವಿಶ್ವಕರ್ಮ ಎಂಬ ಪದವು ಜಗತ್ತಿನ ಕರ್ಮ ಅಥವಾ ಕಾಯಕವು ನಿತ್ಯ ಮತ್ತು ಸತ್ಯ ಎಂದು ಪ್ರತಿಪಾದಿಸುತ್ತದೆ. ವಿಶ್ವ ಎಂದರೆ ಸಕಲ. ಕರ್ಮ ಎಂದರೆ ಕ್ರಿಯೆ ಆಗಿದ್ದು ಸಂಪೂರ್ಣ ಜಗತ್ತು ಕ್ರಿಯಾಶೀಲವಾದದ್ದು ಜಡವಾದುದಲ್ಲ ಎಂಬುದನ್ನು ವಿಶ್ವಕರ್ಮ ಸಂಸ್ಕೃತಿ ಪ್ರತಿಪಾದಿಸುತ್ತದೆ.

ವಿಶ್ವಕರ್ಮ ಸಂಸ್ಕೃತಿಯಲ್ಲಿ ಕರ್ಮ ಅಥವಾ ಕಾಯಕಕ್ಕೆ ಪ್ರಥಮ ಹಾಗೂ ಪ್ರಮುಖ ಪ್ರಾಶಸ್ತ್ಯ ನೀಡಲಾಗುವುದು. ಕರ್ಮದಿಂದ ಉತ್ಪತ್ತಿ, ಉತ್ಪತ್ತಿಯಿಂದ ಅರ್ಥ ಸಂಗ್ರಹ ಅಥವಾ ಸಂಪತ್ತು, ಅರ್ಥ ಸಂಗ್ರಹದಿಂದ ಲೌಕಿಕ ಕ್ಷೇಮ ಸಂತೋಷ, ಮನಶಾಂತಿ ಹೀಗೆ ಈ ಎಲ್ಲ ಸಾಧನಗಳ ತಳಪಾಯ ಸತ್ಕರ್ಮವಾಗಿದೆ. ಕರ್ಮ ಮತ್ತು ಜ್ಞಾನ ಸಮುಚ್ಚಿತವಾದ ಧರ್ಮ ಸಿದ್ದಾಂತವೇ ವಿಶ್ವಕರ್ಮ ಸಂಸ್ಕೃತಿಯ ಜೀವಾಳವಾಗಿದೆ.

ಶಂಬಾ ಜೋಶಿಯವರು ಕರ್ನಾಟಕದ ಸಂಸ್ಕೃತಿ ಚಿಂತಕರಲ್ಲಿ ಆದ್ಯರು. ಇವರು ಮರೆಯಾದ ಕರ್ನಾಟಕವನ್ನು ಹುಡುಕುತ್ತಾ ತಮ್ಮ ಸಂಶೋಧನಾ ಪ್ರಯಾಣವನ್ನು ಆರಂಭಿಸಿದರು. ನಂತರ ಅಪಾರವಾದ ಮಾನವ ಸಂಸ್ಕೃತಿಯನ್ನು ಪರಿಶೋಧಿಸಿದರು. ಶಂಬಾ ಜೋಶಿಯವರ 'ಕರ್ನಾಟಕ ಸಂಸ್ಕೃತಿ', 'ಭಾರತೀಯ ಸಂಸ್ಕೃತಿ' ಹಾಗೂ 'ಮಾನವ ಸಂಸ್ಕೃತಿ' ಕೃತಿಗಳಲ್ಲಿ ವಿಶ್ವಕರ್ಮ ಸಂಸ್ಕೃತಿಯ ಕುರಿತಾದ ಅಧ್ಯಯನವನ್ನು ಕಾಣಬಹುದಾಗಿದೆ. ಇಲ್ಲಿ ಶಂಬಾರವರು ವೇದ ಪೂರ್ವಕಾಲ ಮತ್ತು ವೇದಗಳ ಕಾಲದಲ್ಲಿ ವಿಶ್ವಕರ್ಮ ಸಮುದಾಯ ಮತ್ತು ಸಂಸ್ಕೃತಿಯ ನೆಲೆಯನ್ನು ಗುರುತಿಸುತ್ತಾರೆ. ವಿಶ್ವಕರ್ಮ ಸಂಸ್ಕೃತಿ ಜಾಗತಿಕವಾದದ್ದು ಎಂದು ಪ್ರತಿಪಾದಿಸುತ್ತಾರೆ.

ವಿಶ್ವಕರ್ಮರ ಪ್ರಾಚೀನತೆ ಶಂಬಾ ಜೋಶಿಯವರು ವಿಶ್ವಕರ್ಮ ಸಂಸ್ಕೃತಿಯ ಮೂಲವನ್ನು ವೇದ ಪೂರ್ವಕಾಲದ ಸೈಂಧವ ಸಂಸ್ಕೃತಿಯಲ್ಲಿ ಗುರುತಿಸುತ್ತಾರೆ. ಸೈಂಧವ ಸಂಸ್ಕೃತಿ ಆರ್ಯರಿಗಿಂತಲೂ ಮುಂಚೆ ಇತ್ತು ವೇದ ಪೂರ್ವದಲ್ಲಿತ್ತು ವಿಶ್ವಕರ್ಮರು ಸೈಂಧವ ಸಂಸ್ಕೃತಿಗೆ ಸೇರಿದ್ದಾರೆ ಎಂದು ವಿವರಿಸುವ ಮೂಲಕ ವಿಶ್ವಕರ್ಮರು ವೇದಪೂರ್ವ ಕಾಲೀನರು ಎಂದು ಪ್ರತಿಪಾದಿಸುತ್ತಾರೆ.

"ಕರುನಾಡಿನಲ್ಲಿ ಇಂದಿಗೂ ಜೀವಂತವಾಗಿ ಉಳಿದು ಬಂದಿರುವ ವಿಶ್ವಕರ್ಮ ಪರಂಪರೆಯ ಪಾಂಚಾಳ ವರ್ಗದ ಶಿಲ್ಪಕಲೆಯ ಅಜರಾಮರ ಸಂಸ್ಕೃತಿಯು, ಋಗ್ವೇದ ಸೂಕ್ತಗಳ ತ್ವಷ್ಟಾರ ವಿಶ್ವಕರ್ಮರವರೆಗೂ ನಮ್ಮನ್ನು ಕೊಂಡೊಯ್ಯುತ್ತಿರುವುದು ಸೋಜಿಗದ್ದಾಗಿದೆ" ಎಂದು ಹೇಳುತ್ತಾ ಶಂಬಾ ಜೋಶಿಯವರು ಕರ್ನಾಟಕದಲ್ಲಿ ಇಂದು ವಾಸಿಸುತ್ತಿರುವ ವಿಶ್ವಕರ್ಮರು ವೇದಕಾಲದ ತ್ವಷ್ಟಾರ ವಿಶ್ವಕರ್ಮರವರೆಗೂ ತಮ್ಮ ಪರಂಪರೆಯನ್ನು ಹೊಂದಿರುವುದು ಸೋಜಿಗದ ಸಂಗತಿ ಎಂದು ವಿಶ್ಲೇಷಿಸುತ್ತಾರೆ.

"ಶೈವ, ವೈಷ್ಣವ ಸಂಪ್ರದಾಯದ ಪುರಾತನರು, ಕಣಿಯರು ವೇದದಲ್ಲಿ ಬರುವ ವಿಶ್ವಕರ್ಮನ ಸಪ್ತಋಷಯ ಸಂಪ್ರದಾಯವು ವೇದಪೂರ್ವಕಲದ ಗುರುಪೀಳಿಗೆಯಾಗಿದೆ ಎಂದು ಹೇಳುವ ಮೂಲಕ ಶೈವ, ವೈಷ್ಣವ, ವಿಶ್ವಕರ್ಮ ಸಂಪ್ರದಾಯಗಳು ವೇದ ಪೂರ್ವಕಾಲಕ್ಕೆ ಸೇರಿದೆ" ಎಂದು ಪ್ರತಿಪಾದಿಸುತ್ತಾರೆ.

ವಿಶ್ವಕರ್ಮರು ಆಪಃ ರಸ ಪಂಥೀಯ ಶಂಬಾ ಜೋಶಿಯವರು ಭಾರತದ ಸನಾತನ ಹಿಂದೂ ಧರ್ಮವನ್ನು ಆಪಃ ರಸ ಪಂಥ ಹಾಗೂ ಯಾಜಕ ಪಂಥ ಎಂದು ವಿಭಾಗಿಸುತ್ತಾರೆ. ಆಪಃ ರಸ ಪಂಥೀಯರು ನಾಗಾರಾಧಕರು, ಯಾಜಕರು ಅಗ್ನಿ ಆರಾಧಕರು ಎಂದು ವಿವರಿಸುತ್ತಾರೆ. ಅಗ್ನಿ, ಇಂದ್ರ, ಸವಿತೃ ಮುಂತಾದ ದೇವತೆಗಳು ಎಂದು ಚಂದ್ರ ವಿಶ್ವಕರ್ಮ ರಾಷ್ಟ ಪ್ರಜಾಪತಿ ಮುಂತಾದ ದೇವತೆಗಳು ಎಂದು ಪ್ರತಿಪಾದಿಸುತ್ತಾರೆ.

ಶಂಬಾ ಜೋಶಿಯರ್ವರು ಋಗ್ವೇದದ ಆದಿದೈವತ ಕಥೆಗಳ ಆಧಾರದ ಮೇಲೆ ವಿಶ್ವಕರ್ಮರ ಮೂಲವನ್ನು ಶೋಧಿಸುತ್ತಾ ವಿಶ್ವಕರ್ಮರು ಜಲಮೂಲದವರು ಎನ್ನುತ್ತಾರೆ. ಋಗ್ವೇದದ "ಕಸ್ಮೈ ದೇವಾಯ ಹಿರಣ್ಯ ಗರ್ಭಃ" ಎಂಬ ಸೂಕ್ತವನ್ನು ವಿವರಿಸುತ್ತಾ ವಿಶ್ವಕರ್ಮನನ್ನು 'ಕಂ ದೇವತೆ', 'ನೀರಿನ ದೇವತೆ' ಎಂದು ಪ್ರತಿಪಾದಿಸುತ್ತಾರೆ.

ಋಗ್ವೇದದಲ್ಲಿ ಬರುವ ಆದಿ ದೈವತಾ ಪವಾಡ ಕಥೆಯ ಆಧಾರದ ಮೇಲೆ ವಿಶ್ವಕರ್ಮರು ಆಪಃ ರಸ ಪಂಥೀಯರು ಎಂದು ಶಂಬಾ ಪ್ರತಿಪಾದಿಸುತ್ತಾರೆ. ಋಗ್ವೇದದಲ್ಲಿ ತಮಿತ್ ಗರ್ಭಂ ಪ್ರಥಮ ದಧ್ರಃ ಅಪಃಹಿ ಎಂಬ ಸೂಕ್ತವಿದೆ. ಈ ಸೂಕ್ತವು ಸೃಷ್ಟಿಯ ಪ್ರಾರಂಭದಲ್ಲಿ ಆಪ (ನೀರು) ಬಸಿರಾದುದನ್ನು ವರ್ಣಿಸುತ್ತದೆ. ಈ ಧಾರಣೆಗೆ ಹಿರಣ್ಯ ಗರ್ಭ (ಪ್ರಜಾಪತಿ) ಕಾರಣವೆಂದು ಸೂಚಿಸುತ್ತದೆ. ವಿಶ್ವಕರ್ಮನು ಆಪ ಸ್ವರೂಪಿ ನಾರಾಯಣನಂತೆ ಎಂದು ವಿಶ್ಲೇಷಿಸುತ್ತಾ ಶಂಬಾರವರು ವಿಶ್ವಕರ್ಮರು ಜಲಮೂಲದವರು ಎನ್ನುತ್ತಾರೆ.

ವಿಶ್ವಕರ್ಮರ 'ಪಾಂಚಾಳ' ಎಂಬ ಹೆಸರಿನ ಆಧಾರದ ಮೇಲೆ ವಿಶ್ವಕರ್ಮರು ಆಪ ರಸ ಪಂಥೀಯರು ಎಂದು ಶಂಬಾ ವಿಶ್ಲೇಷಿಸುತ್ತಾರೆ. "ಋಗ್ವೇದದ ವಿಶ್ವಕರ್ಮ, ಪ್ರಜಾಪತಿ, ದಕ್ಷ ಇವರು ಜಲ ಸ್ವರೂಪಿಗಳಾಗಿದ್ದಾರೆ. ಅರ್ವಾಚೀನ ವಿಶ್ವಕರ್ಮ ಬ್ರಾಹ್ಮಣರನ್ನು ಪಾಂಚಾಳರು ಎಂದು ಕರೆವ ವಾಡಿಕೆ ಇದೆ. ಶಿಲ್ಪಿ, ಕಮ್ಮಾರ, ಬಡಿಗ, ಕಂಚುಗಾರ, ಸೊನ್ನಾರರೆಂಬ ಐದು ಶಾಖೆಗಳಲ್ಲಿ ಕೂಡಿ ಪಾಂಚಾಳರೆಂದು ಹೆಸರಿದೆ. ಇಲ್ಲಿ 'ಪಂಚ' ಎಂಬ ಪದಕ್ಕೆ ಅರ್ಥ ಸ್ಪಷ್ಟವಾಗಿದ್ದು, 'ಆಲ' ಎಂಬ ಪದಕ್ಕೆ ರಸ–ಜಲ ಎಂಬ ಅರ್ಥವಿದೆ. ಈ ಆಲ ಪದದ ಮೂಲಕವಾಗಿ ಈ ಸಂಪ್ರದಾಯ ವಿಶ್ವಕರ್ಮನೆಂಬ ಆದಿದೇವನಿಗೆ ಸಂಬಂಧಿಸಿದ್ದು, ಆತನಿಂದ ಪ್ರಾರಂಭವಾದುದು ಎಂಬ ಪುರಾಣ ಕಥಾ ಭಾಗಕ್ಕೂ ಅದರಿಂದ ಪುಷ್ಟಿ ದೊರೆಯುತ್ತದೆ" ಎಂದು ವಿಶ್ಲೇಷಿಸುತ್ತಾ ವಿಶ್ವಕರ್ಮರು ಆಪ ರಸರ ಪಂತಥೀಯರು ಎಂದು ಶಂಬಾ ವಿಶ್ಲೇಷಿಸುತ್ತಾರೆ. ನೀರು ಸೃಷ್ಟಿಯ ಮೂಲ, ಸೃಷ್ಟಿಗೆ ಆಧಾರವಾಗಿದ್ದು, ಸೃಷ್ಟಿಕರ್ತನಾದ ವಿಶ್ವಕರ್ಮನು ನೀರಿನ ದೇವತೆ ಎಂದು ಶಂಬಾ ಪ್ರತಿಪಾದಿಸುತ್ತಾರೆ. ತ್ವಷ್ಟು– ಇಂದ್ರ ಆದಿ ದೈವತಾ ಕಥೆ ಶಂಬಾ ಜೋಶಿಯವರು ತ್ವಷ್ಟು ಇಂದ್ರ ಆದಿ ದೈವತಾ ಕಥೆಯನ್ನು ವಿಮರ್ಶಿಸುತ್ತಾ, ವಿಶ್ವಕರ್ಮ ಸಂಸ್ಕೃತಿಯನ್ನು ವಿಶ್ಲೇಷಿಸುತ್ತಾರೆ.

ಇಂದ್ರನು ವಿಶ್ವಕರ್ಮರ ಪಂಚ ಬ್ರಹ್ಮರ್ಷಿಗಳಲ್ಲಿ ಒಬ್ಬನಾದ ತ್ವಷ್ಟು ಹಾಗೂ ಅದಿತಿಯ ಪುತ್ರನಾಗಿದ್ದಾನೆ. ತ್ವಷ್ಟು ಇಂದ್ರನಿಗೆ ಅತ್ಯಂತ ಶ್ರೇಷ್ಠವಾದ ವಜ್ರಾಯುಧವನ್ನು ನಿರ್ಮಿಸಿಕೊಟ್ಟಿದ್ದಾನೆ. ಇಂದ್ರನು ಸೋಮಪಾನದಲ್ಲಿ ನಿಸ್ಸೀಮನಾಗಿದ್ದು, ಸೋಮಪಾನ ಮಾಡುವುದಕ್ಕಾಗಿ ತನ್ನ ಜನ್ಮದಿನದಂದೆ ತನ್ನ ತಂದೆಯನ್ನು ಹತ್ಯೆ ಮಾಡುತ್ತಾನೆ. ಇದರಿಂದ ಕುಪಿತನಾದ ತ್ವಷ್ಟು ಇಂದ್ರನನ್ನು ಸಂಹರಿಸಲು ವೃತ್ರ ಎಂಬ ನಾಗನನ್ನು ಸೃಷ್ಟಿಸುತ್ತಾನೆ. ಇಂದ್ರ ಇತರೆ ದೇವತೆಗಳ ಸಹಾಯದಿಂದ ವೃತ್ರನನ್ನು ಸಂಹರಿಸುತ್ತಾನೆ. ವೃತ್ರನ ನಂತರ ಇಂದ್ರನನ್ನು ಸಂಹರಿಸಲು ತ್ವಷ್ಟು ವಿಶ್ವರೂಪನನ್ನು ಸೃಷ್ಟಿಸುತ್ತಾನೆ. ವಿಶ್ವರೂಪನು ಯಜ್ಞಕರ್ತನಾಗಿದ್ದು, ಯಜ್ಞದಿಂದ ಬಂದ ಹವಿಸ್ಸನ್ನು ದೇವತೆಗಳಿಗೂ ಅಸುರರಿಗೂ ಸಮಾನವಾಗಿ ಹಂಚುತ್ತಾನೆ. ಅಸುರರಿಗೆ ಹವಿಸ್ಸನ್ನು ಹಂಚಿದಕ್ಕೆ ಕುಪಿತಕೊಂಡ ಇಂದ್ರನು ವಿಶ್ವರೂಪನನ್ನು ಸಂಹರಿಸುತ್ತಾನೆ. ಯಜ್ಞಕರ್ತನಾದ ವಿಶ್ವರೂಪನನ್ನು ಸಂಹರಿಸಿದ್ದರಿಂದ ಇಂದ್ರನು ಬ್ರಹ್ಮಹತ್ಯಾ ದೋಷಕ್ಕೊಳಗಾಗುತ್ತಾನೆ.

ತ್ವಷ್ಟು ಇಂದ್ರ ಆದಿ ದೈವತಾ ಕಥೆಯಲ್ಲಿ ವಿಶ್ವಕರ್ಮರ ಪಂಚ ಬ್ರಹ್ಮರ್ಷಿಗಳಲ್ಲಿ ಒಬ್ಬನಾದ ತ್ವಷ್ಟು ಋಗ್ವೇದದ ಅತ್ಯಂತ ಶ್ರೇಷ್ಠ ಹಾಗೂ ಪ್ರಮುಖ ದೇವತೆಯಾದ ಇಂದ್ರನ ತಂದೆ ಎಂಬುದು ತಿಳಿದುಬರುತ್ತದೆ. ಯಜ್ಞಕರ್ತನಾದ ವಿಶ್ವರೂಪನಿಗೆ ಯಜ್ಞ ಮಾಡುವ ಅಧಿಕಾರವಿದ್ದರೂ, ಯಜ್ಞದ ಹವಿಸ್ಸನ್ನು ಹಂಚುವ ಸ್ವಾತಂತ್ರ್ಯವಿಲ್ಲದಿರುವುದು ಸೋಜಿಗದ ಸಂಗತಿಯಾಗಿದೆ. ಈ ರೀತಿಯಾಗಿ ಋಗ್ವೇದದ ಆದಿದೈವತ ಕಥೆಗಳ ಆಧಾರದ ಮೇಲೆ ಶಂಬಾರವರು ವಿಶ್ವಕರ್ಮ ಸಂಸ್ಕೃತಿಯನ್ನು ವಿಶ್ಲೇಷಿಸುತ್ತಾರೆ. ಸಪ್ತಋಷಿಗಳು ವಿಶ್ವಕರ್ಮನ ಅಂಗಗಳು ವಿಸಪ್ತಋಷಿಗಳು ವಿಶ್ವಕರ್ಮನಿಗೆ ಸಂಬಂಧಿಸಿದವರು. ಈ ವಿಶ್ವಕರ್ಮನು ಆಪ ಸ್ವರೂಪಿಯಾಗಿರುವುದರ ಬಗೆಗೆ ಯಾವುದೇ ಸಂದೇಹವಿಲ್ಲ ಋಗ್ವೇದದಲ್ಲಿ ವಿಶ್ವಕರ್ಮನ ಅಂಗವಾಗಿ ಇರುವ ಸಪ್ತರ್ಷಿಗಳ ಉಲ್ಲೇಖವುಂಟು ಎಂದು ವಿವರಿಸುತ್ತಾ ವೈದಿಕ ಧರ್ಮದ ಶ್ರೇಷ್ಠ ಋಷಿಗಳಾದ ಸಪ್ತರ್ಷಿಗಳು ವಿಶ್ವಕರ್ಮನ ಅಂಗಗಳು ಎಂದು ಶಂಬಾ ಪ್ರತಿಪಾದಿಸುತ್ತಾರೆ.

ವಿಸಲಿಲಲದೊಳಗಿಂದ ಜನ್ಮ ತಾಳುವ ದೇವತಾ ಪವಾಡ ಕಥೆಯ ಸೂಕ್ತದ ಆರಂಭಕ್ಕೆ 'ಕರ್ಮಾರ ಇವ' ದೇವತಾ ಪ್ರತಿಮೆಗಳನ್ನು ಸೃಷ್ಟಿಸುವ ಒಬ್ಬ ಬ್ರಾಹ್ಮಣಸ್ಪತಿಯ ಉಲ್ಲೇಖವಿದೆ ಈ ಕರ್ಮಾರನ್ನು ವಿಶ್ವಕರ್ಮ ಪ್ರಜಾಪತಿಯ ಅಂಗವೆಂಬ ಸಪ್ತ ಋಷಿಗಳಲ್ಲಿ ಒಬ್ಬನಾಗಿರಲು ಶಕ್ಯತೆ ಇದೆಹಿ ಎಂದು ಹೇಳುತ್ತಾ ಕರ್ಮಾರನು ಸಪ್ತಋಷಿಗಳಲ್ಲಿ ಒಬ್ಬನು ಎಂದು ಪ್ರತಿಪಾದಿಸುತ್ತಾರೆ. ವಿಶ್ವಕರ್ಮರು ಶಕ್ತಿ ಆರಾಧಕರು ಶಂಬಾರವರು ಋಗ್ವೇದದ ಆದಿದೈವತ ಪವಾಡ ಕಥೆಗಳ ಆಧಾರದ ಮೇಲೆ ವಿಶ್ವಕರ್ಮರು ಶಕ್ತಿ ಆರಾಧಕರು ಎಂದು ಪ್ರತಿಪಾದಿಸುತ್ತಾರೆ. "ವಿಶ್ವಕರ್ಮ ಬ್ರಾಹ್ಮಣ ಪರಂಪರೆಯಲ್ಲಿ ಕಾಳಿಕಾದೇವಿಯ ಪೂಜ್ಯಳಾಗಿರುವಂತೆ ವೀರಭದ್ರನ ಭಕ್ತಿಯುಂಟು" ಎಂದು ಹೇಳುತ್ತಾರೆ. ಕಾಲ ಸ್ವರೂಪಿಣಿಯಾದ ಕಾಳಿ ವಿಶ್ವಕರ್ಮರ ಆದಿ ದೇವತೆ, ಪ್ರಳಯ ಸ್ವರೂಪಿಯಾದ ಭೈರವ, ವೀರಭದ್ರ ವಿಶ್ವಕರ್ಮರ ಆರಾಧ್ಯ ದೇವತೆ. ಶಕ್ತಿ ದೇವತೆಯನ್ನು ಆರಾಧಿಸುವ ವಿಶ್ವಕರ್ಮರು ಶಾಕ್ತರು ಎಂದು ಶಂಬಾ ಪ್ರತಿಪಾದಿಸುತ್ತಾರೆ.

ಗ್ರೀಕ್ ಪವಾಡ ಕಥೆಗಳೊಂದಿಗೆ ತೌಲನಿಕ ಅಧ್ಯಯನ ಶಂಬಾ ಜೋಶಿಯವರು ಭಾರತೀಯ ಸಂಸ್ಕೃತಿಯನ್ನು ಈಜಿಪ್ಟ್, ಗ್ರೀಕ್, ಬ್ಯಾಬಿಲೋನಿಯ, ಸುಮೇರಿಯನ್ ಮುಂತಾದ ದೇಶಗಳ ಸಂಸ್ಕೃತಿಗಳೊಂದಿಗೆ ತೌಲನಿಕವಾಗಿ ಅಧ್ಯಯನ ನಡೆಸುತ್ತಾರೆ. ಅದೇ ರೀತಿಯಾಗಿ ಶಂಬಾ ಜೋಶಿಯವರು ಗ್ರೀಕ್ ಆದಿ ದೈವತಾ ಕಥೆಗಳೊಂದಿಗೆ ಋಗ್ವೇದದ ಆದಿದೇವತ ಕಥೆಗಳನ್ನು ತೌಲನೀಕರಿಸಿ ವಿಶ್ವಕರ್ಮ ಸಂಸ್ಕೃತಿಯನ್ನು ಅಧ್ಯಯನಸುತ್ತಾರೆ. ಗ್ರೇವ್ಸ್ ಎಂಬ ಸಂಶೋಧಕ ಗ್ರೀಕ್ ಪವಾಡ ಕಥೆಗಳಲ್ಲಿ ಬರುವ ಬಡಿಗ ಕರ್ಮಾರರನ್ನು "They were builder of gigantic walls and master smiths" ಎಂದು ಹೇಳುತ್ತಾರೆ. ಗ್ರೀಕ್ ನ ಪವಾಡ ಕಥೆಯನ್ನು ಋಗ್ವೇದದ ಪವಾಡ ಕಥೆಯೊಂದಿಗೆ ತೌಲನೀಕರಿಸಿ ಅಧ್ಯಯನಿಸುವ ಶಂಬಾ ಋಗ್ವೇದದ ಬಡಿಗ ಕರ್ಮಾರರು 'Master smiths' ಎಂದು ಪ್ರತಿಪಾದಿಸುತ್ತಾರೆ. ಈ ಮೂಲಕ ವಿಶ್ವಕರ್ಮ ಸಂಸ್ಕೃತಿಯು ವಿಶ್ವವ್ಯಾಪಕವಾದದ್ದು, ಸಾರ್ವತ್ರಿಕವಾದದ್ದು ಎಂದು ಶಂಬಾ ಪ್ರತಿಪಾದಿಸುತ್ತಾರೆ.

ವಿಶ್ವಕರ್ಮನ ನಾಮ ವಿಶೇಷತೆ ವೇದ, ಉಪನಿಷತ್ತು, ಪುರಾಣಗಳಲ್ಲಿ ವಿಶ್ವಕರ್ಮನ ವಿವಿಧ ನಾಮಗಳನ್ನು ಉಲ್ಲೇಖಿಸಲಾಗಿದೆ. ಈ ಕುರಿತು ಶಂಬಾರವರು ಅಧ್ಯನಿಸಿದ್ದಾರೆ. ಭಾರತೀಯ ಕಾರ್ತವೀರ್ಯರು, ಸಹಸ್ರಭುಜರು, ಪುರುಷ ಆಕೃತಿಯ ಬ್ರಹ್ಮ, ವಿಷ್ಣು ಮತ್ತು ರುದ್ರರಾಗಿದ್ದಾರೆ. ಮೊದಲ ತಲೆಮಾರಿನಲ್ಲಿ ಇವರ ನಾಮ ಸಂಕೇತಗಳು ತ್ವಷ್ಟಾರ, ವಿಶ್ವಕರ್ಮ, ಕರ್ಮಾರ ಬ್ರಹ್ಮಣಸ್ಪತಿ ಆಗಿದೆ. ಇದಕ್ಕೂ ಮೊದಲಿನ ಆಕೃತಿಯೇ ರುದ್ರ, ಶುಷ್ಣ, ಕೃಷ್ಣಾದಿ ಆಪಃ ರಸದ ಅಹಿಸ್ವರೂಪದ ಆಕೃತಿಗಳಾಗಿವೆ. ಈ ಮೂಲಕ ವಿಶ್ವಕರ್ಮನ ವಿವಿಧ ನಾಮಗಳನ್ನು ಶಂಬಾ ಜೋಶಿಯವರು ವಿಶ್ಲೇಷಿಸುತ್ತಾರೆ.

"ವಿಶ್ವಕರ್ಮ ಎಂಬ ನಾಮ ಸಂಕೇತವಿರಲಿ, ಪ್ರಜಾಪತಿ ಎಂಬ ಪ್ರತಿಮಾ ಸಂಕೇತವಿರಲಿ, ಇದು ದಕ್ಷ ಎಂಬ ನಾಮ ರೂಪದಲ್ಲಿ ಕಾಣಿಸಿಕೊಳ್ಳಲಿ ಇಲ್ಲವೇ ತ್ವಷ್ಟಾರ ಎಂಬ ರೂಪದಲ್ಲಿರಲಿ ರುದ್ರ, ವಿಷ್ಣು, ಋತಾ, ಪರಮೇಷ್ಠಿ, ಬ್ರಹ್ಮ ಎಂಬೀ ಯಾವುದೇ ನಾಮ ಸಂಕೇತವಿರಲಿ 'ಪುರುಷ' ಎಂಬ ಮೂಲ ಸಂಕೇತದಲ್ಲಿ ಅವೆಲ್ಲವೂ ಒಳಗೊಳ್ಳುತ್ತದೆ" ಎಂದು ವಿಮರ್ಶಿಸುತ್ತ ವಿಶ್ವಕರ್ಮ ದೇವತೆಯ ನಾಮಕ್ಕೆ ಸಂಬಂಧಿಸಿದ ಗೊಂದಲಕ್ಕೆ ಪ್ರತಿಕ್ರಿಯಿಸುತ್ತಾ ದೇವನೊಬ್ಬ ನಾಮ ಹಲವು ಎಂದು ಶಂಬಾರವರು ಪ್ರತಿಪಾದಿಸುತ್ತಾರೆ.

ವಿಶ್ವಕರ್ಮ ಸಂಸ್ಕೃತಿಯ ತತ್ವ ಸಿದ್ಧಾಂತ ಭಾರತೀಯ ತತ್ವಜ್ಞಾನದೊಳಗಿನ ಕರ್ಮಸಿದ್ಧಾಂತದ ಮೂಲವನ್ನು ಹುಡುಕುತ್ತಾ ಶಂಬಾರವರು ವಿಶ್ವಕರ್ಮ ಸಂಸ್ಕೃತಿಯಲ್ಲಿ ಕಂಡುಕೊಳ್ಳುತ್ತಾರೆ. ವಿಕರ್ಮರ್ಣ ದೇವನಾಂ ಆನಂದಾಃಹಿ ಎಂಬ ಋಗ್ವೇದದ ಸೂಕ್ತವನ್ನು ವಿವರಿಸುತ್ತ ಕರ್ಮದೇವರಲ್ಲಿ ಪ್ರಧಾನ ದೇವರೆಂದರೆ ವಿಶ್ವ ನಿರ್ಮಾಣ ಕರ್ಮರತನಾದ ವಿಶ್ವಕರ್ಮ ಎಂದು ಶಂಬಾ ಪ್ರತಿಪಾದಿಸುತ್ತಾರೆ. ವಿಶ್ವಕರ್ಮನು ಇಂದ್ರಿಯ ದೇವತೆ, ಸೃಜನಶೀಲ ದೇವತೆಯೆನ್ನುತ್ತಾರೆ. ರವಿ ಕಾಣದನ್ನು ಸೃಷ್ಟಿಸಬಲ್ಲ ವಿಶೇಷ ಪ್ರತಿಭೆಯನ್ನು ಹೊಂದಿದ್ದಾರೆಂದು ಶಂಬಾ ಪ್ರತಿಪಾದಿಸುತ್ತಾರೆ.

ಶಂಬಾರವರು ವಿಶ್ವಕರ್ಮರ ತತ್ವ ಸಿದ್ಧಾಂತವನ್ನು ವಿವರಿಸಿತ್ತ ವಿಮೃತ್ಯುವಿನಿಂದ ಜೀವ ಚೈತನ್ಯ ಸೃಷ್ಠಿಯಾಗಿದೆ ಎಂಬುದು ಆಪಃ ರಸ ಪಂಥೀಯರಾದ ವಿಶ್ವಕರ್ಮರ ಮೂಲಭೂತ ಸಿದ್ಧಾಂತ ಎಂದು ಪ್ರತಿಪಾದಿಸುತ್ತಾರೆ. ವಿಶ್ವಕರ್ಮರು ಪ್ರತಿಯೊಂದು ಅಂತ್ಯವೂ ಆರಂಭಕ್ಕೆ ನಾಂದಿಯಾಗುತ್ತದೆ ಎಂಬ ತತ್ವದಲ್ಲಿ ನಂಬಿಕೆಯಿಟ್ಟಿದ್ದಾರೆ ಎಂದು ಶಂಬಾ ಪ್ರತಿಪಾದಿಸುತ್ತಾರೆ. ಹೀಗೆ ಸಾಂಸ್ಕೃತಿಕ ಚಿಂತಕರಾದ ಶಂಬಾ ಜೋಶಿಯವರು ವಿಶ್ವಕರ್ಮ ಸಂಸ್ಕೃತಿಯನ್ನು ವೇದಗಳ ಹಿನ್ನೆಲೆಯಲ್ಲಿ, ಜಾಗತಿಕ ಆದಿದೈವತ ಕಥೆಗಳ ಹಿನ್ನೆಲೆಯಲ್ಲಿ, ಜಾನಪದ ಆಕರಗಳ ಹಿನ್ನೆಲೆಯಲ್ಲಿ, ಚರಿತ್ರಿಕವಾಗಿ, ತೌಲನಿಕವಾಗಿ, ಸಾಮಾಜಿಕವಾಗಿ ಹಲವು ದೃಷ್ಟಿಕೋನಗಳಿಂದ ಅಧ್ಯಯನಸಿದ್ದಾರೆ.

**ಪರಾಮರ್ಶನ ಗ್ರಂಥಗಳು**

1. ಬರಗೂರ ರಾಮಚಂದ್ರಪ್ಪ, ಶಂಬಾ ಜೋಶಿಯವರ ಸಂಸ್ಕೃತಿ ಚಿಂತನೆ, 1992, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
2. ವೆಂಕಟೇಶ ಜಿ ಮಲ್ಲೇಪುರಂ (ಸಂ), ಶಂಬಾ ಕೃತಿ ಸಂಪುಟ–4, ಭಾರತೀಯ ಸಂಸ್ಕೃತಿ, 1999, ಕನ್ನಡ ಪ್ರಾಧಿಕಾರ, ಬೆಂಗಳೂರು.
3. ವೆಂಕಟೇಶ ಜಿ ಮಲ್ಲೇಪುರಂ (ಸಂ), ಶಂಬಾ ಕೃತಿ ಸಂಪುಟ–5, ಭಾರತೀಯ ಸಂಸ್ಕೃತಿ, 1999, ಕನ್ನಡ ಪ್ರಾಧಿಕಾರ, ಬೆಂಗಳೂರು.
4. ವೆಂಕಟೇಶ ಜಿ ಮಲ್ಲೇಪುರಂ (ಸಂ), ಶಂಬಾ ಕೃತಿ ಸಂಪುಟ–6, ಭಾರತೀಯ ಸಂಸ್ಕೃತಿ, 1999, ಕನ್ನಡ ಪ್ರಾಧಿಕಾರ, ಬೆಂಗಳೂರು.
5. ವೆಂಕಟೇಶ ಜಿ ಮಲ್ಲೇಪುರಂ (ಸಂ), ಡಾ. ಶಂಬಾ ಜೋಶಿ ವಿಶ್ವಕರ್ಮ ದರ್ಶನ, 2017, ಶ್ರೀ ವಿಶ್ವಮಯ ಸಾಹಿತ್ಯ ಪ್ರಾಚಾರ ಸಮಿತಿ, ಹುಬ್ಬಳ್ಳಿ.